OS No.62/2020
PW.1 (ಸುರೇಶ್ ಕುಮಾರ್)

ದಿನಾಂಕಃ 10-02-2022

ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಬಿ.ಎಸ್. ವಕೀಲರಿಂದಃ-**

ನಾನು ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ

ನಾನು ಹಾಜರುಪಡಿಸಿರುವ ದಿನಾಂಕ 05/04/2017 ರ ನೋಂದಾಯಿತ ಕ್ರಯದ ಕರಾರು ಪತ್ರವನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಸದರಿ ಕರಾರು ಪತ್ರದಲ್ಲಿ ಪ್ರತಿವಾದಿಯವರೆಲ್ಲ ಮತ್ತು ಸಾಕ್ಷಿದಾರರಾದ ನಾರಾಯಣಗೌಡ ಮತ್ತು ಅಶೋಕ ಇವರುಗಳೂ ಕೂಡ ಸಹಿಗಳನ್ನು ಹಾಕಿರುತ್ತಾರೆ. ನಾನು ಹಾಜರುಪಡಿಸಿರುವ ನಮೂನೆ-15 ನ್ನು ನಿ.ಪಿ.2 ಎಂದು, ಸರ್ವೆ ಟಿಪ್ಪಣಿಯ ನಕಲನ್ನು ನಿ.ಪಿ.3 ಎಂದು, ಸೆಟಲ್ಮೆಂಟ್ ಆಕಾರ್ ಬಂದ್ ಉತಾರೆಯನ್ನು ನಿ.ಪಿ.4 ಎಂದು, ರೆಕಾರ್ಡ್ ಆಫ್ ರೈಟ್ಸ್‌ನ್ನು ನಿ.ಪಿ.5 ಎಂದು, ರಿಜಿಸ್ಟರಿನ ನಕಲನ್ನು ನಿ.ಪಿ.6 ಎಂದು, ನೋಟೀಸಿನ ಕಛೇರಿ ಪ್ರತಿಯನ್ನು ನಿ.ಪಿ.7 ಎಂದು, ಪ್ರತಿವಾದಿಯವರಿಗೆ ನೋಟೀಸು ಕಳುಹಿಸಿದ ಬಗ್ಗೆ ಅಂಚೆ ರಶೀತಿಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿ.ಪಿ.8 ರಿಂದ 14 ರವರೆಗೆ ಗುರುತಿಸಲಾಯಿತು. ಜಾರಿಯಾಗದೇ ಮರಳಿಬಂದ ಅಂಚೆ ಲಕೋಟೆಗಳನ್ನು ನಿ.ಪಿ.15 ರಿಂದ 18 ರವರೆಗೆ ಗುರುತಿಸಲಾಯಿತು. ನೋಟೀಸು ಜಾರಿಯಾಗಿರುವ ಬಗ್ಗೆ ಒಂದು ಅಂಚೆ ಸ್ವೀಕೃತಿಯನ್ನು ನಿ.ಪಿ.19 ಎಂದು ಗುರುತಿಸಲಾಯಿತು.

ಆದ್ದರಿಂದ ನಾವು ಕೇಳಿದಂತೆ ದಾವೆಯನ್ನು ಡಿಕ್ರಿಗೊಳಿಸಬೇಕೆಂದು ವಿನಂತಿಸುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿಯವರು ಏಕಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆಃ ಇರುವುದಿಲ್ಲ.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ
ತಿ. ನರಸೀಪುರ.